# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 21 Volume 1 Issue 21
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 19-01-2016

ಮೈಸೂರು
ಪುಟ 4
ಬೆಲೆ ₹ 2

## ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಪುಣ್ಯಕ್ಷೇತ್ರಗಳಲ್ಲಿ ನಡೆದ ಪೂಜಾ ಕಾರ್ಯಕ್ರಮ



ಶೃಂಗೇರಿ ಶಾರದಾ ಪೀಠ ರಥೋತ್ಸವದ ವೇಳೆಯಲ್ಲಿ ಕಂಡು ಬಂದ ದೃಶ್ಯ.



ಕೇದಾರನಾಥ ದೇವಸ್ಥಾನದ ಒಂದು ಮನಮೋಹಕ ದೃಶ್ಯ.



ಪೋಲಿಯೋ ಹಾಕುತ್ತಿರುವ ಕಾರ್ಯಕರ್ತೆ



ಪಾರಂಗೋತ್ಸವ - 2016 ವಸುಂಧರಾ ಪ್ರದರ್ಶನ ಕಲೆಗಳ ಕೇಂದ್ರ ವಿಪಿಎಸಿಎಸ್ ಟ್ರಸ್ಟ್‌ನಿಂದ ನಗರದ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿರುವ ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಪಾರಂಗೋತ್ಸವ 2016ಕ್ಕೆ ಪ್ರೊ. ಸುಧಾ ಶೇಖರ್ ಚಾಲನೆ ನೀಡಿದರು.



ಆಟೋ ಎಲ್ಲಮ್ಮ ಬೆಂಗಳೂರಿನಲ್ಲಿ ಜೀವನ ಸಾಗಿಸಲು ಆಟೋ ವೃತ್ತಿಯನ್ನು ಅವಲಂಬಿಸಿರುವುದು.



75ನೇ ಸ್ಮರಣೆ ವರ್ಷಾಚರಣೆ

ನೇತಾಜಿ ಸುಭಾಷ್‌ಚಂದ್ರಬೋಸ್ ಬ್ರಿಟಿಷರ ಕಣ್ಣುತಪ್ಪಿಸಿ ವಿದೇಶಕ್ಕೆ ಪರಾರಿ ಯಾದ 75ನೇ ವರ್ಷಾಚರಣೆ ಸ್ಮರಣೆಗೆ ಕಲ್ಕತ್ತಾದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ನೇತಾಜಿ ಬಳಸುತ್ತಿದ್ದ ಕಾರಿನ ಮುಂದೆ ಪಶ್ಚಿಮ ಬಂಗಾಳದ ಸಿ.ಎಂ. ಮಮತಾ ಬ್ಯಾನರ್ಜಿ ಮತ್ತು ನೇತಾಜಿ ಯವರ ಸಹೋದರ ಸಂಬಂಧಿ ಕೃಷ್ಣ ಬೋಸ್ ದೃಶ್ಯದಲ್ಲಿದ್ದಾರೆ.



ಬೆಂಗಳೂರು ಮೈಸೂರು ರಸ್ತೆಯ ಸಿದ್ಧಲಿಂಗಪುರದಲ್ಲಿ ಮೈ ನವಿರೇಳಿಸುವ ಜಾನುವಾರು ಗಳ ಕಿಚ್ಚು ಹಾಯಿಸುವ ಕಾರ್ಯಕ್ರಮವನ್ನು ಕುತೂಹಲದಿಂದ ವೀಕ್ಷಿಸಲು ನೆರೆದಿದ್ದ ವಿದೇಶಿ ಯರು ಹಾಗೂ ಸ್ಥಳೀಯರು.



ಬೆಂಗಳೂರು ಲಾಲ್‌ಬಾಗ್‌ನಲ್ಲಿ ಮರದ ಕೊರಡಿನಲ್ಲಿ ಕೆತ್ತಿರುವ ಮೀನನ್ನು ಕುತೂಹಲದಿಂದ ನೋಡುತ್ತಿರುವ ಮಹಿಳೆ

ಇದು ನಿಮ್ಮ
ಮಹಿಳಾ ಪತ್ರಿಕೆ
ಪ್ರೋತ್ಸಾಹಿಸಿ, ಬೆಳೆಸಿ.
9379777793



ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಹಾಲಿನ ದರ ಏರಿಕೆ ಬಗ್ಗೆ ಪ್ರತಿಭಟಿಸುತ್ತಿರುವ ನಾಗರೀಕರು.



ಮೈಸೂರಿನ ಕಸಾಪ ನ ಕಛೇರಿಯಲ್ಲಿ ಆಯೋಜಿಸಿದ್ದ ಸಂಕ್ರಾಂತಿ ಕವಿಗೋಷ್ಠಿಯನ್ನು ಎಳ್ಳು ಬೆಲ್ಲ ವಿತರಿಸುವ ಮೂಲಕ ಗಣ್ಯರು ಉದ್ಘಾಟಿಸಿದರು.

ಬದುಕೇ ಹೀಗೆ !
'ಸರಳವಾಗಿ ಬದುಕಲು ಕಲಿಯಿರಿ;
ಇದರಿಂದ ಲೆಕ್ಕವಿಲ್ಲದಷ್ಟು ಒಳಿತುಂಟಾಗುತ್ತದೆ"

Life of 21st Century
ALL ARE LESS
Our Car - Tubeless
Our Educattion - Jobless

ಗಾದೆ
"ವಿವೇಚನೆ ಇಲ್ಲದೆ ಖರ್ಚು ಮಾಡಬಹುದಾದ ಒಂದೇ ಒಂದು ಅಮೂಲ್ಯ ವಸ್ತುವೆಂದರೆ ಕಾಲ"

ಒಗಟು
" ಹರೆಯದಲ್ಲಿ ಹಸಿರು, ಪ್ರಾಯದಲ್ಲಿ ಕೆಂಪು, ಮುಪ್ಪಿನಲ್ಲಿ ಕಪ್ಪು -? "
ನೇರಳೆ ಹಣ್ಣು

# ಕೃಷಿಯಿಂದ ಅನಸೂಯ ಖುಷಿ



ಬೆಳಗಾಂ ಜಿಲ್ಲೆ ಬೈಲ ಹೊಂಗಲ ತಾಲ್ಲೂಕಿನ ಮೇಕಲ ಮರಡಿ ಗ್ರಾಮದ ನಿವಾಸಿ ಫಕೀರಪ್ಪ ಇವರ ಮಗಳು ಅನಸೂಯ ತಳವಾರ್ ಕೃಷಿಯನ್ನೇ ನಂಬಿ ಖುಷಿಯಿಂದಿರುತ್ತಾರೆ. ಈಕೆಯ ಜೊತೆ ಇನ್ನೂ ಮೂವರು ತಂಗಿಯಿದ್ದು ವ್ಯಾಸಂಗ ಮಾಡುತ್ತಿದ್ದಾರೆ. ಅನಸೂಯರವರು 2005ರಲ್ಲಿ ಬಿ.ಎ. ಪದವಿ ಗಳಿಸಿರುತ್ತಾರೆ. ಸರ್ಕಾರಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದಾಗ್ಯೂ ಪ್ರಯೋಜನವಾಗಲಿಲ್ಲ ಹಾಗೂ ಕೆಲಸ ದೊರೆಯಲಿಲ್ಲ. ಇದರಿಂದ ಈಕೆ ಹತಾಶಳಾಗಲಿಲ್ಲ.

ಇವರದು ಬಡ ಕುಟುಂಬ, ಬಡತನದ ಪರಿಸ್ಥಿತಿಯಲ್ಲಿ ಅನಸೂಯ ರವರು ಮನೆಯಲ್ಲೇ ಬಟ್ಟೆ ಹೊಲಿಯುತ್ತಿದ್ದರೂ, ಏನಾದರೂ ಜೀವನದಲ್ಲಿ ಸಾಧನೆ ಮಾಡಬೇಕೆಂಬ ಕಾತುರ ಹಾಗೂ ಹಂಬಲ ಮಾತ್ರ ಇರುತ್ತಿತ್ತು. ಇಂದು ಕೃಷಿಯಲ್ಲಿ ಲಾಭವಿಲ್ಲವೆಂದು ಬೇಸಾಯವನ್ನು ನಿಲ್ಲಿಸಿರುವುದು ಸತ್ಯ. ಹೀಗಿದ್ದಾಗ್ಯೂ ಓರ್ವ ಮಹಿಳೆ ಕೃಷಿಯನ್ನು ಸವಾಲಾಗಿ ಸ್ವೀಕರಿಸಿ. ಸಾಧನೆಗೈದು ಯಶಸ್ಸು ಕಂಡಿದ್ದಾರೆ. ನಿಜಕ್ಕೂ ಇವರ ಮನಸ್ಥೈರ್ಯ ವನ್ನು ಮೆಚ್ಚಬೇಕಾದ್ದೆ.

ಕೆಲವು ವರ್ಷಗಳ ಹಿಂದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ವಿವಿಧ ಕಡೆ ಕೃಷಿ ಅಧ್ಯಯನ ಪ್ರವಾಸಕ್ಕೆ ಹೊರಟಿದ್ದರು. ಆಗ ಆ ಸಂಸ್ಥೆಯಲ್ಲಿನ ವ್ಯವಸ್ಥೆ ಕಂಡು ನಾನು ಏಕೆ ಕೃಷಿಕಳಾಗಬಾರದು ಎಂದು ಅಂದು ಯೋಚಿಸಿ ಕನಸನ್ನು ಕಂಡು ನನಸನ್ನಾಗಿ ಮಾಡಿಕೊಂಡಿರುವ ಈಕೆ ಸುತ್ತ ಮುತ್ತಲಿನ ಗ್ರಾಮದ ಆಕರ್ಷಣೀಯ ಮಹಿಳೆಯಾಗಿ ಬಿಂಬಿಸಿರುತ್ತಾರೆ.

ಕಳೆದ ನಾಲ್ಕು ವರ್ಷಗಳ ಹಿಂದೆ ಮೇಲೆ ತಿಳಿಸಿದ ಸಂಸ್ಥೆಯ ಯೋಜನೆಯ ಸಂಪರ್ಕ ಇವರ ಊರಿನಲ್ಲೇ ಒದಗಿ ಬಂದಿತು. ಇವರು **ಪೂರ್ಣಿಮ ಸ್ವಯಂ ಸೇವಾ ಸಂಘ** ವನ್ನು ಕಟ್ಟಿದರು. ಆ ಸಂಘದಿಂದ 1 ಲಕ್ಷ ರೂಪಾಯಿ ಸಾಲ ಪಡೆದು ತಮ್ಮ ಮೂರು ನಾಲ್ಕು ಎಕರೆಯಲ್ಲಿದ್ದ ಕಲ್ಲು ಬಂಡೆಗಳನ್ನು ಒಡೆದು ಮಟ್ಟವಾಗಿ ಮಾಡಿಕೊಂಡು ಸ್ವತಃ ಅವರೇ ಉಳುಮೆ ಮಾಡಿ ಕೃಷಿಗೆ ಯೋಗ್ಯವಾಗುವಂತೆ ಭೂಮಿಯನ್ನು ಪರಿವರ್ತಿಸಿದರು. ಇದರಿಂದ ಅನಸೂಯ ಭೂಮಿ ತಾಯಿಯೇ ಜೀವನವೆಂದು ಭಾವಿಸಿ ಜೀವನದಲ್ಲಿ ತೃಪ್ತಿಯನ್ನು ಕಾಣುತ್ತಿದ್ದಾರೆ.

ಕೃಷಿಯನ್ನು ಆರಂಭಿಸಿದಾಗಿನಿಂದ ತರಕಾರಿಗಳು, ಬಾಳೆ, ಕಬ್ಬು, ಶೇಂಗಾ, ಇತರೆ ನೀರಾವರಿ ಬೆಳೆಯನ್ನು ಬೆಳೆಯಲು ಶುರುಮಾಡಿದರು. ಅದರಿಂದ ಒಳ್ಳೆಯ ಫಲ ಸಿಕ್ಕಿತು. ಅಕ್ಕಪಕ್ಕದವರೆಲ್ಲ ಇವರನ್ನು ನೋಡಿ ಆನಂದದಿಂದ ಮಾತಾಡಿಸುತ್ತಾರಲ್ಲದೆ, ಅವರುಗಳೂ ಸಹ ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯುತ್ತಾರೆ. ತರಕಾರಿಯಿಂದ ಒಳ್ಳೆಯ ಆದಾಯ ಬಂದಿದೆ. ಕಬ್ಬಿನಿಂದಲೂ ಉತ್ತಮ ಆದಾಯ ಬಂದಿದೆ. ಈಗ ಪಪ್ಪಾಯಿ ಬೆಳೆ ಬೆಳೆದು ಫಸಲಿನ ಫಲಿತಾಂಶವನ್ನು ಎದುರು ನೋಡುತ್ತಿದ್ದಾರೆ.

ಇವರ ಜಮೀನಿನಲ್ಲಿ ನಡೆಯುತ್ತಿರುವ ಕೃಷಿ ಚಟುವಟಿಕೆಗೆ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಕಾರವಾರ, ಅಂಕೋಲಾ, ಸವದತ್ತಿ, ಗೋಕಾಕ್, ಬೈಲಹೊಂಗಲ, ಬೆಳಗಾಂ, ಧಾರವಾಡ ಇನ್ನಿತರ ಸ್ಥಳಗಳಿಂದ ಅಧ್ಯಯನ ದಂಡಗಳು ಭೇಟಿ ನೀಡಿ, ಅನಸೂಯರವರ ಕೆಲಸಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿವೆ ಹಾಗೂ ಇನ್ನೂ ಕೃಷಿ ಕ್ಷೇತ್ರದಲ್ಲಿ ಮೇಲಕ್ಕೆ ಬರಲಿ ಎಂದು ಹಾರೈಸುತ್ತಾರೆ.

ಇವರ ಅಭಿಪ್ರಾಯವೆಂದರೆ ಹಳ್ಳಿಯಿಂದ ನಗರಕ್ಕೆ ವಲಸೆ ಹೋಗುವುದು, ಜೀವನೋಪಾಯಕ್ಕೆ ನೌಕರಿ ಸಿಗಲಿಲ್ಲವೆಂದು ತಲೆಕೆಡಿಸಿಕೊಳ್ಳುವುದು, ಇತರೆ ದುಶ್ಚಟಕ್ಕೆ ಬಲಿಯಾಗುವುದರ ಬದಲು ಹಳ್ಳಿಯಲ್ಲೇ ಭೂಮಿತಾಯಿಯನ್ನು ನಂಬಿ ನಡೆದರೆ ನಗರದಲ್ಲಿ ಸಿಗುವ ನೌಕರಿ ಸಂಬಂಳಕ್ಕಿಂತ ಹೆಚ್ಚು ಸಂಪಾದಿಸಬಹುದೆಂದು ಅಲ್ಲದೆ ಹಲವಾರು ಮಂದಿಗೆ ಉದ್ಯೋಗವನ್ನು ನೀಡಬಹುದೆಂದು ಇದರಿಂದ ಜೀವನದಲ್ಲಿ ತೃಪ್ತಿ ಪಡೆಯಬಹುದೆನ್ನುತ್ತಾರೆ.

ಅನಸೂಯರವರಿಗೆ ಉಳುಮೆ ಗಾಗಿ ವಿದ್ಯುತ್‌ಚಾಲಿತ ಬೋರ್‌ವೆಲ್ ಅವಶ್ಯಕತೆ ಇದೆ. ಅದರ ಜೊತೆಗೆ ಉಳುಮೆಗಾಗಿ ಬೇರೆಯವರ ಹೊಲವನ್ನು ಪಡೆದು ಸಪೋಟ, ದಾಳಿಂಬೆ, ಮಾವು ಬೆಳೆಗಳನ್ನು ಬೆಳೆಯಬೇಕೆಂಬ ಹಂಬಲವನ್ನು ಇಟ್ಟುಕೊಂಡಿದ್ದಾರೆ. ತಂದೆ ಫಕೀರಪ್ಪ ಹಾಗೂ ಮೂವರು ಸಹೋದರಿಯರು ನೀಡಿದ ಸಹಕಾರ ಉತ್ತೇಜನದಿಂದಲೇ ನಾನು ಈ ಮಟ್ಟಕ್ಕೆ ಬಂದಿರುವುದೆಂದು ಅನಸೂಯ ರವರು ದೂರವಾಣಿಯ ಮೂಲಕ ಮಹಿಳಾ ವಿಶೇಷ ಸಂದರ್ಶನದಲ್ಲಿ ಮಾಹಿತಿಯನ್ನು ನೀಡಿರುತ್ತಾರೆ.

ಅನಸೂಯರವರ ಕನಸು ಹಾಗೂ ಆಸೆ ಈಡೇರಲಿ. ಇವರಂತೆ ಮುಂದೆ ಬರಲಿಚ್ಛಿಸುವವರು ಹಾಗೂ ಅವರ ಮಾರ್ಗದರ್ಶನ ಬೇಕೆನ್ನುವವರು ಮೊ: 9844661204 ಸಂಪರ್ಕಿಸಬಹುದು. **ನಿರೂಪಣೆ : HVS**

## ರೈಲ್ವೆ ಇಲಾಖೆಯಿಂದ ಸಹಾಯವಾಣಿ

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದಾಗಿ ನೈಋತ್ಯ ರೈಲ್ವೆ ಇಲಾಖೆ ನೂತನ ಸಹಾಯವಾಣಿ ಆರಂಬಿಸಿದೆ. ಲಗೇಜ್ ಕಳ್ಳತನ, ಅಭದ್ರತೆ ಸೇರಿದಂತೆ ಮತ್ತಿತರ ಸುರಕ್ಷತೆಗಾಗಿ ಇನ್ನು ಮುಂದೆ ಸಹಾಯವಾಣಿ ಸಂಖ್ಯೆ 182ಕ್ಕೆ ಕರೆ ಮಾಡಿ ದೂರು ಮತ್ತು ಸಹಾಯ ಪಡೆದುಕೊಳ್ಳಬಹುದಾಗಿದೆ.

## ರಜನಿಗೆ ಲೂಯಿಬ್ರೈಲ್ ಪ್ರಶಸ್ತಿ

ಮೈಸೂರು ಅರಮನೆ ಉತ್ತರ ದ್ವಾರದ ನಗರ ಕ. ಸಾ. ಪ. ಕಛೇರಿಯಲ್ಲಿ ಇತ್ತೀಚೆಗೆ ನಡೆದ ವಿಕಾಸ ಲೂಯಿಬ್ರೈಲ್ ಪ್ರಶಸ್ತಿ ಸಮಾರಂಭವನ್ನು ಸಂಸ್ಕೃತ ವಿವಿ ಕುಲಪತಿ ಡಾ. ಪದ್ಮಾ ಶೇಖರ್ ಉದ್ಘಾಟಿಸಿದರು. ದೃಷ್ಟಿದೋಷವುಳ್ಳ ಪ್ರಥಮ ಮಹಿಳಾ ಲೆಕ್ಕ ಸನ್ನದುಗಾರರಾದ ಬೆಂಗಳೂರಿನ ರಜನಿ ಗೋಪಾಲಕೃಷ್ಣರವರಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಮಂಜುಳ ಮಾನಸರವರು ಪ್ರಶಸ್ತಿ ಪ್ರಧಾನ ಮಾಡಿದರು.

## ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ

ಆದಿ ಚುಂಚನಗಿರಿಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ರಾಜ್ಯಮಟ್ಟದ ಮೂರನೇ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಕುಮಾರಿ ಇಂಚರ ಉದ್ಘಾಟಿಸಿದರು. ಸಮ್ಮೇಳನಾಧ್ಯಕ್ಷೆಅಂತಃ ಕಿರಣ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಗೊ.ರು. ಚನ್ನಬಸಪ್ಪ, ನಾಗಾಭರಣ, ಡಾ. ಕೆ. ಆರ್. ನಲ್ಲೂರು ಪ್ರಸಾದ್ ಮತ್ತಿತರರು ಹಾಜರಿದ್ದರು.

## ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ರೈಲ್ವೆನೇಮಕಾತಿ ಮಂಡಳಿಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜನವರಿ 25 ರಂದು ಕೊನೆಯ ದಿವಸ.



ಸೂರ್ಯ ಮುಳುಗುತ್ತಿರುವ ಮನಮೋಹಕ ದೃಶ್ಯ



ನಗು ಮುಖದೊಂದಿಗೆ ನಟಿ ಸೋನಂ ಕಪೂರ್



ಅಂದಚೆಂದವನ್ನು ಸವಿಯಲು ಕೊಚ್ಚಿನ್ ನಗರ


## ಪತ್ರಿಕೆಯ ಓದುಗರಲ್ಲಿ ಹಾಗೂ ನಾಗರೀಕರಲ್ಲಿ ಮನವಿ



ವಾರಪತ್ರಿಕೆಯ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗಾಗಿ ಧನ ಸಹಾಯ ಮಾಡುವವರು ಯಾವುದೇ ಅಂಚೆ ಕಛೇರಿಯಲ್ಲಿ ಉಳಿತಾಯ ಖಾತೆಗೆ ನಿಮ್ಮ ಕೈಲಾದಷ್ಟು ಹಣವನ್ನು ಜಮಾ ಮಾಡಿ. ಜಮಾವಾದ ಹಣಕ್ಕೆ ರಶೀತಿ ಕೊಡಲಾಗುವುದು. ಪತ್ರಿಕೆಯು ಈಗ ಆನ್‌ಲೈನ್‌ನಲ್ಲಿ www.mahilavishesha.in ಲಭ್ಯವಿದೆ. ಓದಿ ಸಹಾಯ ಮಾಡಿ, ಬೇರೆಯವರಿಗೆ ಸಹಾಯ ಮಾಡಲು ತಿಳಿಸಿ ನಿಮ ಸಹಕಾರದ ಕೈ ಸಂತೋಷದಿಂದ ನೀಡಿ.

ಅಂಚೆ ಕಛೇರಿ : ಯಾದವಗಿರಿ, ಮೈಸೂರು, ಕರ್ನಾಟಕ
ಖಾತೆದಾರರ ಹೆಸರು : ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು, ಮಹಿಳಾ ವಿಶೇಷ ಪತ್ರಿಕೆ
ಉಳಿತಾಯ ಖಾತೆಯ ಸಂಖ್ಯೆ : 3098204565



"ನಿಮ್ಮ ಸಹಕಾರ ಸಾವಿರಾರು ಜನರಿಗೆ ಉಪಕಾರ"




ಆಕ್‌ಲ್ಯಾಂಡ್‌ನಲ್ಲಿ ಪುಟ್ಟ ನಾಯಿಮರಿ ಬೆನ್ನ ಮೇಲೆ ಕುಳಿತಿರುವ ಪುಟಾಣಿ ಬೊಂಬೆ



ನೀಲಿ ಬಣ್ಣದ ಹೂವು ನೋಡಲು ಚೆಂದ

# SHIVAALI Multipurpose Multicrore Projects Karnataka

## ಗಮನಿಸಿರಿ ವಿಶೇಷ ಸುದ್ದಿ - ಅಪರೂಪದ ವಿಷಯ



### THIS ADVERTISEMENT IS APPLICABLE TO ALL TALUKS OF KARNATAKA

1. Own your own Industries in your own places
   ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಲಿಚ್ಛಿಸುವವರು (FMCG ಮಾತ್ರ) ನಮ್ಮನ್ನು ಸಂಪರ್ಕಿಸಿರಿ.
2. Earn & Learn ಕಲಿಯುತ್ತಾ ದುಡಿ, ದುಡಿಯುತ್ತಾ ಕಲಿಯಿರಿ ಸ್ಕೀಂನಲ್ಲಿ ಕೆಲಸ ಮಾಡಲಿಚ್ಛಿಸುವವರು ಕಾಲೇಜ್ ವಿದ್ಯಾರ್ಥಿಗಳು ನಮ್ಮನ್ನು ಸಂಪರ್ಕಿಸಿರಿ.
3. All MLM like Modicare, Yethuru Bio Tech, Sami Direct, Vestige, IMC Agents, of Mysore are invited to sale our FMCG 10 products, 16 items of Shivaali group of Industries 30% commission on MRP along with your products to your customers and all LIC Agents of Mysurue are invited for booking of your policy holders/ publics for our beneficial products.
4. **ಗರೀಬಿ ಹಟಾವೋ** ಮಾಡಿ ನಿಮ್ಮ ಜೀವನ ನಿರ್ವಹಣೆಯನ್ನು ಗಟ್ಟಿ ಮಾಡಿಕೊಳ್ಳಿರಿ. 10 ಸಾವಿರ ಬಂಡವಾಳದಲ್ಲಿ ಒಂದು ವಾರ್ಡ್‌ಗೆ ನಮ್ಮ Shivaali FMCG Productsಗಳ Sales Depo ಪಡೆದು ತಿಂಗಳಿಗೆ 10 ಸಾವಿರದಿಂದ 1 ಲಕ್ಷದವರೆಗೆ ದುಡಿಯುವ ಅವಕಾಶವನ್ನು ಪಡೆಯಿರಿ.
5. ಶಿವಾಲಿ ಗ್ರೂಪ್ ಆಫ್ ಇಂಡಸ್ಟ್ರೀಸ್‌ಗೆ Life Time members ಗಳಾಗಿ, ರೂ. 10 ಸಾವಿರ ಹೂಡಿಕೆಯಲ್ಲಿ ತಿಂಗಳಿಗೆ ಒಂದು ಸಾವಿರ ಬೆಲೆಯ ದಿನನಿತ್ಯ ಬಳಕೆಯ (FMCG) ವಸ್ತುಗಳನ್ನು ಉಚಿತವಾಗಿ ಪಡೆದು ವರ್ಷಕ್ಕೊಂದು ಸಾರಿ Bank FD Interest ಪಡೆಯುವ ಅವಕಾಶವನ್ನು ಪಡೆಯಿರಿ.
6. ನಮ್ಮ ಶಿವಾಲಿ Feed Back world ನಲ್ಲಿ ಹಣವನ್ನು ಬಿತ್ತಿ ಹಣವನ್ನು ಬೆಳೆಯಿರಿ. ಈ ಸಂಸ್ಥೆಯಲ್ಲಿ ಹಣ ಹೂಡಿ ಒಂದು ಲಕ್ಷಕ್ಕೆ ಪ್ರತಿ ತಿಂಗಳು ರೂ. 5000 ಮತ್ತು ವರ್ಷಕ್ಕೊಂದು ಸಾರಿ ಕಂಪನಿಯ ಲಾಭದಲ್ಲಿ ಪಾಲನ್ನು ಪಡೆಯಿರಿ.

**Katihally K.M. Chandrashekarappa,** M.Sc.
Small Industries consultant
Technical Advisor, Resource Person
Principal : Shivaali JOC Training College
Proprietor: Shivaali Group of Industries
President : Shivaali Group of Ashrama's

**Corporate Office:** Shivaali House-2880, 3rd cross, Pampapathi Road, Behind Law Court, Saraswathipuram, Mysore-570009 Ph: 8453681310







30gms Rs-20/-




30gms Rs-20/-

250gms








ಬೆಂಗಳೂರಿನಲ್ಲಿ ಕಳೆದ ವಾರ ಮುಕ್ತಾಯವಾದ ೬೪ನೇ ರಾಷ್ಟ್ರೀಯ ವಾಲಿಬಾಲ್‌ನ ಚಾಂಪಿಯನ್ ಶಿಪ್‌ನ ವಿಭಾಗದಲ್ಲಿ ಪ್ರಶಸ್ತಿಗೆದ್ದ ರೈಲ್ವೇಸ್ ತಂಡ ಖುಷಿಯಿಂದಿರುವ ಕ್ಷಣ

## ಸಾನಿಯಾ ಹಿಂಗಿಸ್‌ಗೆ ಒಲಿದ ವಿಜಯಲಕ್ಷ್ಮಿ



ವಿಶ್ವದ ನಂ. 1 ಮಹಿಳಾ ಜೋಡಿಯಾದ ಸಾನಿಯಾ ಮತ್ತು ಹಿಂಗಿಸ್ ಇತ್ತೀಚೆಗೆ ನಡೆದ ನ್ಯೂ ಸೌತ್ ವೇಲ್ಸ್ ಸೆಂಟರ್‌ನಲ್ಲಿ ಮುಕ್ತಾಯವಾದ ಪಂದ್ಯಾವಳಿಯಲ್ಲಿ ಫ್ರಾನ್ಸ್‌ನ 3 ನೇ ಶ್ರೇಯಾಂಕಿತ ಜೋಡಿಯನ್ನು 1-6, 7-5, 10-5 ಸೆಟ್‌ಗಳಿಂದ ಗೆಲುವು ಪಡೆದರು. ಸಾನಿಯಾ ಹಿಂಗಿಸ್ ಜೋಡಿ ಸತತ 30 ನೇ ಗೆಲುವನ್ನು ಕಂಡಿದ್ದು ಸಿಡ್ನಿ ಇಂಟರ್ ನ್ಯಾಷನಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದರು.

## ಚಿತ್ರನೋಡಿ ಆನಂದಿಸಿ



FBB ನಾಗಪುರದಲ್ಲಿ ನಡೆದ ಆಡಿಷನ್



ಕ್ಯಾಂಪಸ್ ಪ್ರಿನ್ಸ್ ಫಿಟ್‌ನೆಸ್ ಸೆಷನ್ಸ್



ಕ್ಯಾಂಪಸ್ ಪ್ರಿನ್ಸ್ ಮೇಕಪ್ ಸೆಷನ್ಸ್



ರಿತೇಶ್ ಹಾಗೂ ಗೆನೆಲಿಯೋ ದೇಶ್‌ಮುಖ್ ಜೊತೆಯಲ್ಲಿ ಮಗು


**Need your own website**
**at Rs. 2000/- onwards**
**interested contact**
**M : 9379777793**



**ಜಿ. ಪ್ರಫುಲ್ಲಚಂದ್ರ** ಪತ್ರಬರಹಗಾರರು
ನೋಂದಣಿ ಸಲಹೆಗಾರರು
ಕರಾರು ಪತ್ರ, ಕ್ರಯಪತ್ರರಿಜಿಸ್ಟ್ರೇಷನ್‌ಗಳಿಗೆ ಸಂಪರ್ಕಿಸಿರಿ
# 386, 14 ನೇ ಮುಖ್ಯ ರಸ್ತೆ, ಸರಸ್ವತಿಪುರಂ,
ಮೈಸೂರು ಮೊ : 9480379977

**ಕೇಟರಿಂಗ್**
ಎಲ್ಲಾ ಸಭೆ ಸಮಾರಂಭದ ಸಸ್ಯಹಾರಿ ಊಟದ ಹಾಗೂ
(ಶಾಮಿಯಾನ, ಟೇಬಲ್, ಚೇರ್ಸ್, ಉಚಿತ ವ್ಯವಸ್ಥೆ ಸೇರಿ)ಇತ್ಯಾದಿ
ಸಂಪರ್ಕಿಸಿ ಮೊ: 9845606363

ಪತ್ರಬರಹಗಾರರು
ಸ್ಥಿರ ವಸ್ತುಗಳ ಖರೀದಿ,ಮಾರಾಟ ಮತ್ತು
ನೋಂದಣಿಗಾಗಿ ಸಂಪರ್ಕಿಸಿ
**ಎಂ.ಎಸ್. ಧನಂಜಯ**
ಮೊ : 9880663497

**ಶ್ರೀಲಕ್ಷ್ಮಿ ಮಹಿಳಾ ತರಬೇತಿ ಸಂಸ್ಥೆ**
ಯುವತಿಯರಿಗಾಗಿ ಟೈಲರಿಂಗ್ ಫ್ಯಾಷನ್ ಡಿಸೈನಿಂಗ್,
ಬ್ಯೂಟಿಷಿಯನ್ ಕೋರ್ಸ್, ಕಸೂತಿ ಕೆಲಸ,
ಮೆಹೆಂದಿ ಕೋರ್ಸ್‌ಗಳಿಗೆ
ಸಂಪರ್ಕಿಸಿ. ಮೊ : 9611066634.

**ತೇಜಸ್ ಬಿಲ್ಡರ್ಸ್, ಮೈಸೂರು**
ಸರ್ಕಾರಿ ನೌಕರರಿಗೆ ಮಾತ್ರಾ ಯಾವುದೇ ಅಡ್ವಾನ್ಸ್ ಇಲ್ಲದೆ ಶೇಕಡಾ 25ರಷ್ಟು ಕೆಲಸ ಮುಗಿಯುವವರೆಗೆ ಸಾಮಾನು ಸಹಿತ ವಾಸ್ತು ಪ್ರಕಾರ ಅಂದವಾಗಿ ಮನೆಯನ್ನು ಕಟ್ಟಿಕೊಡಲಾಗುವುದು.
ಸಂಪರ್ಕಿಸಿ : 8970308730 / 9845849004

**ಶ್ರೀದೇವಿ ಮಹಿಳಾ ಸಂಘ,**
ರಾಮಕೃಷ್ಣನಗರ,
ಮೈಸೂರು
ಸಂಪರ್ಕಿಸಿ : 7795242873 / 8904863223

**ಜನಶ್ರೀ ಸೋಲಾರ್**
ಮನೆಗೆ, ರೈತರಿಗೆ, ಆಫೀಸಿಗೆ ಉಪಯೋಗಿಸಬಹುದಾದಂತಹ ಸೋಲಾರ್ ಉಪಕರಣಗಳಗೆ ಅವಶ್ಯಕತೆ ಇರುವವರು
ಸಂಪರ್ಕಿಸಿ. ಮೊ: 9379777793



**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ
(ಪ್ರತಿ ಮಂಗಳವಾರ)
ಮೈಸೂರು ಕಛೇರಿ :
C/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯರಸ್ತೆ, 5ನೇ ಕ್ರಾಸ್,
ಸರಸ್ವತಿಪುರಂ, (ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು - 570 009
ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 8880334444
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16